ಅಧ್ಯಕ್ಷರು:- ಪ್ರಕಾಶ್‌ರವರೇ, ತಾವು ಸ್ವಲ್ಪ ಸಮಯ ಬಿಟ್ಟು ಅನಂತರ ಸದನಕ್ಕೆ ಬರಬೇಕು. Let the Members realise. Let the Members realise, I have said hundred and odd times that it is a privilege to get into House. One should also know how to use the privileges conferred on them.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್. ಪ್ರಕಾಶ್‌ರವರು ಸದನದಿಂದ ಹೊರಗಡೆ ಹೋದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಇವೊತ್ತು ವಿರೋಧ ಪಕ್ಷದ ನಾಯಕರು ಈ ವಿಷಯವನ್ನು ಪ್ರಸ್ತಾಪಿಸಿದ್ದು ಏಕೆಂದರೆ, just to alert the government. ಪ್ರತಿ ಸಲವೂ ಸದನದಲ್ಲಿ ಕೋರಂ ಇಲ್ಲವೆಂದು ನಾವು ಬಡಿದುಕೊಳ್ಳುವುದು. ಅಲ್ಲದೆ, ಬೇಡಿಕೆಗಳನ್ನು ಸಂಬಂಧಪಟ್ಟ ಮಂತ್ರಿಗಳು ಮಂಡಿಸುವುದಿಲ್ಲ, ಉತ್ತರ ಕೊಡುವಾಗಲೂ ಇರುವುದಿಲ್ಲ, ಗಮನ ಸೆಳೆಯುವ ಸೂಚನೆ ಬಂದಾಗಲೂ ಹಾಜರಿರುವುದಿಲ್ಲ. ಇದರ ಬಗ್ಗೆ ಸರ್ಕಾರವನ್ನು ಎಚ್ಚರಿಸುವುದಕ್ಕಾಗಿ ಡಿವಿಜನ್ ಅನ್ನು ಪ್ರೆಸ್ ಮಾಡಿದ್ದೇ ಹೊರತು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬೇಕೆಂದಾಗಲೀ, ಇಲ್ಲವೇ ತಾವು ಹೇಳಿದಂತೆ ಸರ್ಕಾರವನ್ನು ಬ್ಲಾಕ್‌ಮೇಲ್ ಮಾಡಬೇಕೆಂದಾಗಲೀ ಆ ದೃಷ್ಟಿಯಿಂದಲ್ಲ. ಸದನಕ್ಕೆ ಅನೇಕ ಹೊಸ ಸದಸ್ಯರು ಬಂದಿದ್ದು ಸದನವನ್ನು ಹೇಗೆ ನಡೆಸಬೇಕೆನ್ನುವುದರ ಬಗ್ಗೆ ಅವರಿಗೂ ಗೊತ್ತಾಗಲೆನ್ನುವ ದೃಷ್ಟಿಯಿಂದ ಈ ರೀತಿ ಮಾಡಿದ್ದೇ ಹೊರತು ಬೇರೆ ಯಾವ ಉದ್ದೇಶದಿಂದಲೂ ಅಲ್ಲ. ಆದುದರಿಂದ, ಈಗ ನಾವು ಮತ್ತೆ ಡಿವಿಜನ್‌ಗೆ ಪ್ರೆಸ್ ಮಾಡುವುದಿಲ್ಲ, ಬೇಡಿಕೆಗಳನ್ನು ಅಂಗೀಕರಿಸಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಬಹಳ ನೊಂದು ಒಂದು ಮಾತನ್ನು ನಿಮಗೆ ಹೇಳುತ್ತಿರುವುದೇನೆಂದರೆ, ನಾನು 1983ರಿಂದಲೂ ಇಲ್ಲಿ ಶಾಸಕನಾಗಿ ಕೆಲಸ ಮಾಡುತ್ತಿದ್ದು, ಜನರು ನಿಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದು, ಐದು ವರ್ಷಗಳ ಕಾಲ ನೀವು ಸರ್ಕಾರದಲ್ಲಿದ್ದು ಆಡಳಿತ ನಡೆಸಬೇಕೆಂದು ಹೇಳುವಂಥ ವ್ಯಕ್ತಿ ನಾನಾಗಿದ್ದೇನೆ. ಆದರೆ, ಆಡಳಿತ ಪಕ್ಷ ಮತ್ತು ಪ್ರತಿ ಪಕ್ಷ ಸರಿಸಮಾನವಾದ ಸಂಖ್ಯೆಯಲ್ಲಿರುವ ಸಂದರ್ಭದಲ್ಲಿ ವಿರೋಧ ಪಕ್ಷಗಳನ್ನು ಹಗುರವಾಗಿ ತೆಗೆದುಕೊಂಡು, ಅಧಿವೇಶನ ನಡೆಯುತ್ತಿರುವಾಗ ಸದನದಲ್ಲಿ ಮಂತ್ರಿಗಳು, ಶಾಸಕರುಗಳು ಯಾರೂ ಇಲ್ಲದೆ ಆಡಳಿತ ನಡೆಸಿಕೊಂಡು ಹೋಗುತ್ತಿದ್ದೀರಿ, ನಾವಂತೂ ರಾತ್ರಿಯಿಡೀ ನಿದ್ದೆ ಮಾಡುತ್ತಿಲ್ಲ, ನಾಚಿಕೆಯಿಂದ ತಲೆ ತಗ್ಗಿಸುವಂಥ ಪರಿಸ್ಥಿತಿ ಬರುತ್ತಿದೆ, ಏನೇನೋ ಆಗುತ್ತಿದೆಯೆಂದು ನೋವಾಗುತ್ತಿದೆ, ಜನಹಿತ ಮರೆತು ಯಾವ ಗೊಂದಲದಲ್ಲಿ, ಪರಿಸ್ಥಿತಿಯಲ್ಲಿ ಆಡಳಿತ ಪಕ್ಷ ಇದೆಯೆಂಬುದು ನಾಡಿನ ಜನರಿಗೆ ಗೊತ್ತಾಗಲೆನ್ನುವ ದೃಷ್ಟಿಯಿಂದ ನಾನು ಡಿವಿಜನ್‌ಗೆ ಪ್ರೆಸ್ ಮಾಡಿದೆ. ಆದರೆ, ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಡಿವಿಜನ್‌ಗೆ ಪ್ರೆಸ್ ಮಾಡುವುದು ಬೇಡವೆಂದು ಹೇಳಿರುವುದರಿಂದ ನಾನು ಡಿವಿಜನ್‌ಗೆ ಪ್ರೆಸ್ ಮಾಡುವುದಿಲ್ಲ. ನಾನು ವಿರೋಧ ಪಕ್ಷದ ನಾಯಕನಾಗಿ ನನ್ನ ಭಾವನೆಯೇನಿದೆ ಎಂಬುದನ್ನು ವ್ಯಕ್ತಪಡಿಸಿ ನನ್ನ ಕರ್ತವ್ಯ